




ಭೀಮಸೇನರ ಶಾರೀರ ಮಾತ್ರವಲ್ಲ; ಹಾಡುವಾಗಿನ ಮುಖಮುದ್ರಿಕೆಗಳೂ ಚಿತ್ತಾಪಹಾರಿ

ಜನಪ್ರಿಯತೆ ಮತ್ತು ಖ್ಯಾತಿಯನ್ನು ಜೋಶಿಯವರಷ್ಟು ದೀರ್ಘಕಾಲ ಅನುಭವಿಸಿದ ಸಮಕಾಲೀನ ಹಿಂದುಸ್ತಾನಿ ಗಾಯಕರಿಲ್ಲ. ಸಂಪ್ರದಾಯವನ್ನು ತುಂಬಾ ಗೌರವಿಸುತ್ತಿದ್ದ ಭೀಮಸೇನರು ಸಂಗೀತದಲ್ಲಿ ಸಾಂಪ್ರದಾಯಿಕವೆಂದು ಗೌರವಿಸಲ್ಪಟ್ಟಿರುವ ಮೌಲ್ಯಗಳು ಮತ್ತು ಸಮೂಹ–ಸಂಸ್ಕೃತಿಯ ಅಭಿರುಚಿಗಳ ನಡುವೆ ಸಮತೋಲನ ಸಾಧಿಸಿದರು. ಅದಕ್ಕೆ ಬೇಕಾದ ಶೈಲಿಯನ್ನು ರೂಪಿಸಿಕೊಂಡರು ಎನ್ನುತ್ತಾರೆ ವಿಮರ್ಶಕರು. ಹಲವಾರು ಶೈಲಿಗಳು ಹಾಗೂ ಪದ್ಧತಿಗಳು ಅವರ ಸಂಗೀತದಲ್ಲಿ ನವಿರಾಗಿ ಸೇರಿಕೊಂಡಿದೆ. ಅಮೀರಖಾನರ ಸಂಗೀತ ಅವರನ್ನು ಪ್ರಭಾವಿಸಿದೆ. ಅವರ ದ್ರುತ್ ಗಾಯನದಲ್ಲಿ ಗ್ವಾಲಿಯರ್, ಅತ್ರೌಳಿ–ಜಯಪುರ ಮತ್ತು ಪಟಿಯಲಾಗಳಂತಹ ಭಿನ್ನ ಶೈಲಿಗಳ ರಸಮಿಶ್ರಣವನ್ನು ಕಾಣಬಹುದು.

ಸಾಮಾನ್ಯವಾಗಿ ಅವರು ಹಾಡುವುದು ಮಿಯಾ ಕಿ ತೋಡಿ, ಗುಜರಿ ತೋಡಿ, ಜೋಗಿಯಾ, ಕೋಮಲ ರಿಷಭ ಅಸಾವರಿ, ಗೌಡ ಸಾರಂಗ, ಬೃಂದಾವನಿ ಸಾರಂಗ, ಯಮನ್, ಯಮನ್‌ಕಲ್ಯಾಣ, ಶುದ್ಧ ಕಲ್ಯಾಣ, ಪೂರಿಯಾ ಕಲ್ಯಾಣ, ಮಾರು ಬಿಹಾಗ, ದರಬಾರಿ, ಅಭೋಗಿ, ಮಾಲಕಂಸ್ ಮುಂತಾದ ಕೆಲವೇ ರಾಗಗಳು. ತಮ್ಮ ಸ್ವಭಾವ ಮತ್ತು ತಮ್ಮ ಸಂಗೀತದ ಸ್ವರೂಪಗಳಿಗೆ ಈ ರಾಗಗಳು ಹೊಂದಿಕೊಳ್ಳುತ್ತವೆ ಎನ್ನುತ್ತಿದ್ದರು ಭೀಮಸೇನರು. ಸಂಕೀರ್ಣ ಮತ್ತು ವಿಚಿತ್ರವಾಗಿ ಕೇಳುವ ರಾಗಗಳನ್ನು ಕಛೇರಿ ವೇದಿಕೆಗಳ ಮೇಲೆ ನಿರೂಪಣೆ ಮಾಡುವುದು ಭೀಮಸೇನರಿಗೆ ಸುತರಾಂ ಇಷ್ಟವಿರಲಿಲ್ಲ. “ರಾಗಾಲಾಪನೆ ಪ್ರಾರಂಭಿಸಿದ ತಕ್ಷಣ ರಾಗದ ಸ್ಪಷ್ಟ ಚಿತ್ರ ಮೂಡಬೇಕು. ಆಗ ಕೇಳುಗನಿಗೆ ಗೊಂದಲವಿರುವುದಿಲ್ಲ. ಗಾಯಕ ಹಾಗೂ ಕೇಳುಗನ ನಡುವಿನ ಸಂವಹನ ಸುಸೂತ್ರವಾಗುತ್ತದೆ. ಶಾಸ್ತ್ರೀಯ ಸಂಗೀತವನ್ನು ಆಕರ್ಷಕ ಮಾಡಿ ಪ್ರಸ್ತುತಪಡಿಸಿದರೆ, ಜನರು ಮೆಚ್ಚಿಕೊಳ್ಳುತ್ತಾರೆ” ಎನ್ನುತ್ತಿದ್ದರು.

ಭೀಮಸೇನರನ್ನು ಆರಂಭದಿಂದಲೂ ಪೋಷಿಸಿದವರು ಮುಂಬೈನ ಮರಾಠಿ ಶ್ರೋತೃಗಳು. ಅವರೆಲ್ಲರೂ ತಾನಪ್ರಧಾನವಾದ ನಾಟ್ಯ ಸಂಗೀತವನ್ನು ತುಂಬಾ ಮೆಚ್ಚಿಕೊಂಡಿದ್ದವರು. ಅವರಿಗಿದ್ದ ತಾನಕಾರಿಯ ಒಲವನ್ನು ತೃಪ್ತಿಪಡಿಸಲು ಜೋಶಿಯವರು ಶ್ರಮಿಸಿದರು. ಅವರು ಹೇಳಿದಂತೆ ಕೇಳುವ ಕಂಠ ಅವರಿಗಿತ್ತು. ಅದನ್ನು ಬಳಸಿಕೊಂಡರು. ಮರಾಠಾ ಶ್ರೋತೃಗಳ ಮೆಚ್ಚುಗೆ ಗಳಿಸಿಕೊಂಡರು. ಶಾಸ್ತ್ರೀಯ ಗಾಯಕರಾಗಿ ಪ್ರಸಿದ್ಧರಾದ ಮೇಲೆ ಮರಾಠಿ ಶ್ರೋತೃಗಳಿಗಾಗಿ ಜನಪ್ರಿಯ ಮರಾಠಿ ಪದಗಳನ್ನು, ಕನ್ನಡಿಗರಿಗಾಗಿ ಕನ್ನಡ ಭಕ್ತಿಗೀತೆಗಳನ್ನು ಹಾಡಲು ಪ್ರಾರಂಭಿಸಿದರು. ತಮ್ಮ ರಂಗು, ವೈವಿಧ್ಯ ಮತ್ತು ಹೊಳಪುಗಳಿಂದ ಸಂತವಾಣಿ ಅವರ ಜನಪ್ರಿಯತೆಯನ್ನು ವಿಪರೀತವಾಗಿ ಬೆಳೆಸಿತು.

ಹಿನ್ನೆಲೆಗಾಯನದಲ್ಲಿ ಅವರಿಗೆ ಒಲವಿರಲಿಲ್ಲ. ಶಾಸ್ತ್ರೀಯ ಸಂಗೀತವಿದ್ದ ಕೆಲವು ಸಿನಿಮಾಗಳಲ್ಲಿ ಹಾಡಿದ್ದಾರೆ. ಮೊದಲು ಮರಾಠಿಯ ಗುಳಾಚಾ ಗಣಪತಿ, ಮೀ ತುಳಶೀ ತುಝ್ಯಾ ಆಂಗಣೀ ಚಿತ್ರಗಳಿಗೆ ಹಾಡಿದರು. ‘ಬಸಂತ್ ಬಹಾರ್’ ಅವರು ಹಾಡಿದ ಮೊದಲ ಹಿಂದಿ ಸಿನಿಮಾ. ‘ಭೈರವಿ’, ‘ಅನ್‌ಹೋನಿ’, ‘ಅನ್‌ಕಹೀ’ ಚಿತ್ರದಲ್ಲಿ ಹಾಡಿದ್ದಾರೆ. ‘ರಘುವರ್ ತುಮ್‌ಕೋ ಮೇರಿ ಲಾಜ್’ ಎಂಬ ಭಜನ್ ಗಾಯನಕ್ಕೆ ಪ್ರೆಸಿಡೆಂಟ್ಸ್ ಅವಾರ್ಡ್ ಲಭಿಸಿತು. ಕನ್ನಡದ ‘ಸಂಧ್ಯಾರಾಗ’, ‘ನೋಡಿ ಸ್ವಾಮಿ ನಾವಿರೋದೇ ಹೀಗೆ’, ‘ಮಕ್ಕಳಿರಲವ್ವಾ ಮನೆ’ ತುಂಬ ಇವುಗಳಲ್ಲಿಯೂ ಹಾಡಿದ್ದಾರೆ.

ತಮ್ಮ ವೃತ್ತಿಬದುಕಿನ ನಡುವಿನಲ್ಲಿ ಅಂಟಿದ ಕುಡಿತದ ಚಟ ಅವರ ಸಂಗೀತದ ಮೇಲೂ ಪರಿಣಾಮ ಬೀರಿತು. ಇದರ ಅರಿವು ಅವರಿಗೂ ಇತ್ತು. “ಕುಡಿತದಿಂದಾಗಿ ಕೆಲವೊಮ್ಮೆ ನನ್ನ ಕಾರ್ಯಕ್ರಮಗಳು ಕೆಟ್ಟು ಹೋಗುತ್ತಿದ್ದವು. ಗಾಯನ ಎಷ್ಟು ಸೂಕ್ಷ್ಮ ಕೆಲಸವೆಂದರೆ, ಕುಡಿದ ಮೇಲೆ ಅದನ್ನು ಮಾಡಲಾಗದು. ನೀವು ನಿಮ್ಮ ಕಲೆಯ ಮೇಲೆ ಅಗತ್ಯವಾದ ಹಿಡಿತ ಇಟ್ಟುಕೊಳ್ಳಲಾರಿರಿ” ಎಂದಿದ್ದರು.

ಕ್ರಮೇಣ ಬದಲಾದ ಅವರ ಸಂಗೀತವನ್ನು ಕಲಾವಿಮರ್ಶಕ ಮೋಹನ್ ನಾಡಕರ್ಣಿಯವರು ಸ್ವಲ್ಪ ವಿಮರ್ಶಾತ್ಮಕವಾಗಿ ನೋಡುತ್ತಾರೆ. “ಐವತ್ತರ ದಶಕದ ಆರಂಭದಿಂದ ಭೀಮಸೇನರ ಗಾಯನದಲ್ಲಿ ಖಯಾಲ ನಿರೂಪಣೆಯ ವಿಧಾನ ಬದಲಾಯಿತು. ವಿಲಂಬಿತದಲ್ಲಿ ಅವರ ಆಲಾಪ ಶ್ರೇಷ್ಠವಾಗಿರುತ್ತಿತ್ತು. ಆದರೆ, ಕ್ರಮೇಣ ದ್ರುತಕಾಲದ ಗೀಳಿನಿಂದಾಗಿ ಆರಂಭದಲ್ಲಿ ಅರಳಿದ್ದ ಗಂಭೀರ ಶಾಂತ ವಾತಾವರಣ ಸಂಪೂರ್ಣ ನಾಶವಾಗದಿದ್ದರೂ ಕ್ರಮೇಣ ಕಲುಷಿತಗೊಳ್ಳುತ್ತಿತ್ತು. ಅವರ ವಿಲಂಬಿತ ಖಯಾಲ್‌ಗಳು ಕ್ರಮೇಣ ಹೆಚ್ಚು ಚಿಕ್ಕವಾದವು. ಬೇರೆ ಬೇರೆ ಸ್ವರಗಳಿಗೆ ಸಮ್ ಅನ್ನು ಬದಲಾಯಿಸುವ ಹೊಸ ಪದ್ಧತಿಯನ್ನೂ ಅವರು ಆರಂಭಿಸಿದರು. ಒಟ್ಟಂದದಲ್ಲಿ ಭೀಮಸೇನರು ಪ್ರಾಯಶಃ ಇಪ್ಪತ್ತನೆಯ ಶತಮಾನದ ಜೀವನ ಮತ್ತು ವಿಚಾರಕ್ಕನುಗುಣವಾಗಿ ಖಯಾಲ ಗಾಯನದ ಶೈಲಿಯಲ್ಲಿ ಮಹತ್ತರ ಮರುಹೊಂದಿಕೆ ತಂದರು.”

ಸಂಗೀತವಲ್ಲದೆ ಇನ್ನೂ ಹಲವು ಕ್ಷೇತ್ರಗಳಲ್ಲಿ ಜೋಶಿಯವರಿಗೆ ಅಪಾರ ಪ್ರತಿಭೆಯಿತ್ತು. ತಾವು ಸಂಗೀತಗಾರ ಆಗದೇ ಹೋಗಿದ್ದರೆ ಕಾರ್ ಮೆಕ್ಯಾನಿಕ್ ಆಗುತ್ತಿದ್ದೆ ಅಂತಲೂ ಹೇಳಿಕೊಂಡಿದ್ದಾರೆ. ಅವರಿಗೆ ಡ್ರೈವಿಂಗ್ ಒಂದು ಗೀಳಾಗಿತ್ತು. ಕಾರಿನ ರಿಪೇರಿಯನ್ನು ಮಾಡಬಲ್ಲವರಾಗಿದ್ದರು. ನಾಟಕಗಳಲ್ಲೂ ನಟಿಸಿದ್ದಾರೆ. ನಾಟಕಕ್ಕೆ ಸಂಗೀತ ನಿರ್ದೇಶಿಸಿದ್ದಾರೆ. ಹೊಸ ರಾಗಗಳು ಬೇಕು ಎಂದ ನಿರ್ದೇಶಕರಿಗಾಗಿ ಕಲಾಶ್ರೀ, ಲಲಿತ್‌ಭಟಿಯಾರ್, ಮಾರವಾಶ್ರೀ ಇಂತಹ ರಾಗಗಳನ್ನು ಸೃಷ್ಟಿಸಿದರು. ಅವರೊಬ್ಬ ಒಳ್ಳೆಯ ಯೋಗಪಟು. ಸೊಗಸಾಗಿ ಈಜುತ್ತಿದ್ದರು ಮತ್ತು ಫುಟ್‌ಬಾಲ್ ಆಡುತ್ತಿದ್ದರು. ಒಳ್ಳೆಯ ಸಂಘಟಕರೂ ಕೂಡ. ಪುಣೆಯಲ್ಲಿ ಪ್ರತಿವರ್ಷವೂ ಸವಾಯಿ ಗಂಧರ್ವರ ಹೆಸರಿನಲ್ಲಿ ಬೃಹತ್ ಸಂಗೀತ ಸಮಾರೋಹವನ್ನು ನಡೆಸುತ್ತಿದ್ದರು. ಮಾಧವ ಗುಡಿ, ವಿನಾಯಕ ತೊರವಿ, ನಾಗರಾಜ ಹವಾಲ್ದಾರ್, ಶ್ರೀನಿವಾಸ ಜೋಶಿ, ಶ್ರೀಕಾಂತ ದೇಶಪಾಂಡೆ ಅಂತಹ ಶಿಷ್ಯರನ್ನು ಹೊಂದಿದ್ದರು.

ಭಾರತರತ್ನವೂ ಸೇರಿದಂತೆ ಬಹುಪಾಲು ಪ್ರತಿಷ್ಠಿತ ಪ್ರಶಸ್ತಿಗಳೆಲ್ಲಾ ಅವರಿಗೆ ಲಭಿಸಿವೆ. ಅವರನ್ನು ಅಪಾರವಾಗಿ ಪ್ರೀತಿಸುತ್ತಿದ್ದ ಶ್ರೋತೃಗಳ ಸಮೂಹವೇ ಇತ್ತು. ಇಂದು ಜೋಶಿಯವರಿದ್ದರೆ ನೂರು ವರ್ಷವಾಗುತ್ತಿತ್ತು. ಭೀಮಸೇನರು ಕಿರಾಣಾ ಘರಾಣೆಗೆ ಗಮನಾರ್ಹ ಮಾರ್ಪಾಡನ್ನು ಮತ್ತು ಖಯಾಲ ಗಾಯಕಿಗೆ ಹೊಸ ಆಯಾಮವನ್ನು ತಂದುಕೊಟ್ಟರು. ಅವರದು ಬಂಡಾಯಗಾರನ ಮನಸ್ಸಲ್ಲ, ಪಾರಂಪರಿಕ ಸಂಗೀತವನ್ನು ಕುರಿತಂತೆ ಅಪಾರ ನಂಬಿಕೆಯನ್ನು ಉಳಿಸಿಕೊಂಡು ಬದಲಾವಣೆಗೆ ಹಾತೊರೆಯುವ ಮೌನ ಸುಧಾರಕನ ಮನಸ್ಸು. ■